ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ

ಸಿಸಿ ನಂಬರ **292**/2020

ಸಿ ಡಬ್ಲ್ಯೂ- **5**

ಪಿ ಡಬ್ಲ್ಯೂ- **5**

ದಿಃ 21-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ದೀಪಕ ಗೊವೇಕರ

ತಂದೆಯ ಹೆಸರುಃ ಮಾರುತಿ

ವಯಸ್ಸುಃ **57** ವರ್ಷ

ಉದ್ಯೋಗಃ ಮೆಕಾನಿಕ, ಕೆ.ಎಸ್.ಆರ್.ಟಿ.ಸಿ. ಘಟಕ, ಅಂಕೋಲಾ

ವಿಳಾಸಃ ಕಾರವಾರ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

2004 ರಿಂದ ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಘಟಕದಲ್ಲಿ ಮೆಕಾನಿಕ ಎಂದು ಸೇವೆ ಸಲ್ಲಿಸುತ್ತಿದ್ದೇನೆ. ಚಾಸಾ-**1** ರವರು ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಘಟಕ ಡಿಪೋ ಮ್ಯಾನೇಜರ ಎಂದು ಸೇವೆ ಸಲ್ಲಿಸುತ್ತಿದ್ದರು. ಚಾಸಾ-**2** ರಿಂದ **4**, **6** ರಿಂದ **9** ಕೆ.ಎಸ್.ಆರ್.ಟಿ.ಸಿ. ಘಟಕದ ಸಿಬ್ಬಂದಿಗಳಿರುತ್ತಾರೆ. ಆರೋಪಿ ಚಾಲಕ ಎಂದು ನಮ್ಮ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ. ಅಂದಾಜು **2-3** ವರ್ಷಗಳ ಹಿಂದೆ ಸಾಯಂಕಾಲದ ಡ್ಯೂಟಿಗೆ ಹಾಜರಾದವರು **4.30** ಗಂಟೆಗೆ ಪೊಲೀಸರು ದಾಖಲೆಗೆ ಸಹಿ ಪಡೆದಿರುತ್ತಾರೆ. ಸಾಕ್ಷಿ ನಿಪಿ-**4** ಮತ್ತು **11** ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**4** ಸಿ ಮತ್ತು **11** ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು

ಬರೆದಿದೆ, ಯಾವ ವಿಚಾರವಾಗಿ ಬರೆದಿರುತ್ತಾರೆಂದು ಮಾಹಿತಿ ಇಲ್ಲ. ನಾನು ಸಹಿ ಮಾಡಿದ ಸಮಯದಲ್ಲಿ ಬೇರೆ ಯಾರು ಯಾರು ಇದ್ದರೆಂದು ಹೇಳಲು ಬರುವುದಿಲ್ಲ. ಪೊಲೀಸರು ಪಂಚನಾಮೆ ಸಲುವಾಗಿ ನನ್ನನ್ನು ಕರೆದಿಲ್ಲ. ಪೊಲೀಸರು ಬಸ್ ಡಿಪೋಗೆ ಬಂದಿದ್ದು ನಾನು ಗಮನಿಸಲಿಲ್ಲ. ಪ್ರಕರಣದ ಕುರಿತು ಮಾಹಿತಿ ಇಲ್ಲ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಸ್ಥಳದಲ್ಲಿ ಹಾಜರಿರಲಿಲ್ಲ, ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಮಾಹಿತಿ ಇಲ್ಲ.

ಈ ಹಂತದಲ್ಲಿ ಎ.ಪಿ.ಪಿ. ಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕಾಗಿ ಕೋರಿಕೊಂಡಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಗಿರುತ್ತದೆ. ಎ.ಪಿ.ಪಿ.ಯವರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟಿ ಸವಾಲುಃ ಎ.ಪಿ.ಪಿ. ಯವರಿಂದಃ</u>

ದಿಃ 12-08-2018 ರಂದು ನಿಪಿ-11 ರ ಮೇಲಿರುವ ಸಹಿಯನ್ನು ಸಾಯಂಕಾಲ 4.00 ಗಂಟೆಯಿಂದ 4.45 ಗಂಟೆಯವರೆಗೆ ಚಾಸಾ-6 ರವರು ತೋರಿಸಿದ ಮೇರೆಗೆ KSRTC ಡಿಪೋದ ವಾಹನ ದುರಸ್ತಿ ಕಾರ್ಯಾಗಾರದ ಬಳಿ ಪಂಚನಾಮೆ ಮಾಡಿ, ನನ್ನ ಹಾಗೂ ಚಾಸಾ-4 ಮತ್ತು 6 ರವರ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಸಾಯಂಕಾಲ 6.00 ಗಂಟೆಯಿಂದ 6.45 ರವರೆಗೆ ಚಾಸಾ-1 ರವರು ತೋರಿಸಿದ ಮೇರೆಗೆ KSRTC ಬಸ್ ನಿಲ್ದಾಣದ ಟಿಕೇಟ್ ಕಂಟ್ರೋಲರ್ ಕೊಠಡಿ ಎದುರು ಪಂಚನಾಮೆ ಮಾಡಿ, ನನ್ನ ಹಾಗೂ ಚಾಸಾ-4 ರವರ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್.ಆರ್.ಎನ್. ವಕೀಲರಿಂದಃ

ಚಾಸಾ–1, 6 ಮತ್ತು 7 ರವರು ನಮ್ಮ ಇಲಾಖೆಯಲ್ಲಿ ನನಗಿಂತ ಹಿರಿಯ ಅಧಿಕಾರಿಗಳು ಎಂದರೆ ಸರಿ. ಅವರು ದಾಖಲೆಗಳಿಗೆ ಸಹಿ ಮಾಡು ಎಂದು ಹೇಳಿದರೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ಕಾರ್ಯ ನಿರ್ವಹಿಸುವ ಸ್ಥಳಕ್ಕೆ ಪೊಲೀಸರು ಬಂದು ಕೇಳಿಕೊಂಡ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದ ಸಂಗತಿ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಸಹಿ ಪಡೆದ ದಾಖಲೆ ಯಾವ ಕಾರಣಕ್ಕಾಗಿ ಮಾಡಿರುತ್ತಾರೆಂದು ಹೇಳಲು ಬರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.